1) ಮಾರ್ಚ್ ತಿಂಗಳ ಮುನ್ನ ನಿವೃತ್ತಿ ವಯಸ್ಸನ್ನು 58 ವರ್ಷಗಳಿಂದ ಇಳಿಸುವ ಬಗ್ಗೆ ಸರ್ಕಾರದ ಮುಂದೆ ಏನಾದರೂ ಪ್ರಸ್ತಾವನೆ ಇದೆಯೇ?

2) ಹಾಗಿದ್ದಲ್ಲಿ, ರಾಜ್ಯ ಸರ್ಕಾರದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಎಷ್ಟಕ್ಕೆ ನಿಗದಿಗೊಳಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಕಳ್ಳಂಬೆಳ್ಳ ಹುಳಿಯಾರ್ ಮತ್ತು ಹೊಸಕೆರೆಗಳಲ್ಲಿ ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸುವುದು

1099 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದ ಕಳ್ಳಂಬೆಳ್ಳ ಹುಳಿಯೂರ್ ಮತ್ತು ಹೊಸಕೆರೆಗಳಲ್ಲಿ ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನಿರ್ದಿಷ್ಟವಾದ ಪ್ರಸ್ತಾವನೆಗಳೇನಾದರೂ ಇವೆಯೇ?

ಆ) ಹಾಗಿದ್ದಲ್ಲಿ, ಈ ವಿದ್ಯುತ್ ಉಪ-ಕೇಂದ್ರ ಸ್ಥಾಪನೆ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ?

ಇ) ಸರ್ಕಾರವು ವೋಲ್ಟೇಜನ್ನು ಉತ್ತಮಪಡಿಸುವ ದೃಷ್ಟಿಯಿಂದ ಈ ವಿದ್ಯುತ್ ಉಪ-ಕೇಂದ್ರಗಳನ್ನು ಸ್ಥಾಪಿಸುವ ಕೆಲಸಗಳನ್ನು ತೆಗೆದುಕೊಳ್ಳಲು ತುರ್ತು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಳ್ಳಂಬೆಳ್ಳದಲ್ಲಿ 66:11 ಕೆ.ವಿ. 1x 6.3 ಎಂ.ವಿ.ಎ. ಸಾಮಾರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಮತ್ತು ಹುಳಿಯೂರಿನಲ್ಲಿ 66:11 ಕೆ.ವಿ.1x 8 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯು ಮಂಡಳಿಯ ಮುಂದಿದೆ. ಆದರೆ ಸದ್ಯಕ್ಕೆ ಹೊಸಕೆರೆಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಮಂಡಳಿಯ ಮುಂದಿಲ್ಲ.

ಕಳ್ಳಂಬೆಳ್ಳ : ಒ.ಡಿ.ಎಸ್. ಕೆಲಸ ಮತ್ತು ಇನ್ನಿತರ ಪ್ರಾರಂಭಿಕ ಕೆಲಸಗಳು ಪ್ರಗತಿಯಲ್ಲಿವೆ. ಈ ವಿದ್ಯುತ್ ಉಪ-ಕೇಂದ್ರದ ಕೆಲಸವು 1991-92ನೇ ಸಾಲಿನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಹುಳಿಯೂರು : ಹಿರಿಯೂರು - ಮಾಥೋಡು 66 ಕೆ.ವಿ.ಲೈನಿನ ಕೆಲಸವನ್ನು 1992-93ನೇ ಸಾಲಿನಲ್ಲಿ ಪೂರ್ಣಗೊಳಿಸುವ ಗುರಿಯನ್ನು ಮಂಡಳಿಯು ಹೊಂದಿದೆ. ಈ ಕಾರಣದಿಂದ ಹುಳಿಯೂರಿನಲ್ಲಿ ವಿದ್ಯುತ್ ಉಪ-ಕೇಂದ್ರದ ಕೆಲಸವನ್ನು 1992Ë93ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ.

ಇ) 'ಅ'ನಲ್ಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮಹಾರಾಷ್ಟ್ರದ ದೂದಗಂಗಾ ಯೋಜನೆ

1068 - ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಮಹಾರಾಷ್ಟ್ರದ ದೂಧಗಂಗಾ ಯೋಜನೆಯಿಂದ ನೀರು ಪಡೆಯುವುದು ಸತ್ಯ ಸಂಗತಿಯೇ?

ಆ) ಹಾಗಿದ್ದಲ್ಲಿ, ಟಿ.ಎಂ.ಸಿ.ಯಲ್ಲಿ ಪ್ರಮಾಣವೆಷ್ಟು?